**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.647/2021**

**ಪಿ.ಡಬ್ಲ್ಯೂಃ 3**

**ಸಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು ಃ ತಮ್ಮೇಗೌಡ
ತಂದೆಯ ಹೆಸರು ಃ ನಂಜೇಗೌಡ
ವಯಸ್ಸು ಃ 54 ವರ್ಷ
ಉದ್ಯೋಗ ಃ ವ್ಯವಸಾಯ
ವಾಸಸ್ಥಳ ಃ ರಂಗೇನಹಳ್ಳಿ ಗ್ರಾಮ, ಮುಡುಗೋಡು

**ದಿನಾಂಕಃ 15-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

2018 ರಲ್ಲಿ ಚಾಸಾ-1 ರವರ ಮನೆಯಲ್ಲಿ ಆದ ಕಳ್ಳತನದ ವಿಚಾರವಾಗಿ ಪೋಲೀಸರು ಮಹಜರ್ ಮಾಡಿದ್ದು, ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ನನ್ನ ಜೊತೆ ಶಿವರಾವ್ ರವರು ಸಹ ಮಹಜರ್ಗೆ ಸಹಿ ಮಾಡಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 (ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-3 ರ ಛಾಯಾಚಿತ್ರವನ್ನು ತೋರಿಸಿದ್ದು ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ.**

ಚಾಸಾ-1 ರವರು ನಿಮ್ಮ ಊರಿನಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಚಾಸಾ-1 ರವರು ನಿಮಗೆ 13 ವರ್ಷಗಳಿಂದ ಪರಿಚಯ ಇರುತ್ತಾರೆ ಎಂದರೆ, ಸಾಕ್ಷಿಯು ಚಾಸಾ-1 ರವರನ್ನು ನೋಡಿರುತ್ತೇನೆ, ಆದರೆ ಪರಿಚಯ ಇರುವುದಿಲ್ಲ ಎಂದರೆ ನುಡಿಯುತ್ತಾರೆ. ಮಹಜರ್ ಮಾಡಿದ ಸಮಯ ನಿಮಗೆ ತಿಳಿದಿದೆಯಾ ಎಂದರೆ, ಸಾಕ್ಷಿಯು ಮುಂದುವರಿದು ರಾತ್ರಿ 9.00 ಗಂಟೆ ಇರಬಹುದು ಎಂದು ನುಡಿಯುತ್ತಾರೆ. ಸಾಕ್ಷಿಗೆ ನೀವು ಮಹಜರ್ ಗೆ ಸಹಿ ಮಾಡುವ ಸಮಯದಲ್ಲಿ ನಿಮ್ಮ ಜೊತೆ ಯಾರು ಯಾರು ಇದ್ದರು ಎಂದರೆ, ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿದಿರುತ್ತಾರೆ. ಪೋಲೀಸರು ಮಹಜರ್ ವರದಿಯನ್ನು ನೀವು ಘಟನಾ ಸ್ಥಳಕ್ಕೆ ಹೋದ ಮೇಲೆ ಬರೆದರಾ? ಎಂದರೆ ಸಾಕ್ಷಿಯು ನನ್ನ ಮುಂದೆಯೇ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಪೋಲೀಸರು ಮಹಜರನ್ನು ಯಾವ ಸಮಯದಲ್ಲಿ ಮಾಡಿ ಮಹಜರ್ ಬರೆದರು ಎಂದರೆ, ಸಾಕ್ಷಿಯು 9.00 ಗಂಟೆಗೆ ಶುರು ಮಾಡಿ ಅರ್ಧ ಗಂಟೆಗಳ ಕಾಲ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಮಗೆ

ಕನ್ನಡ ಓದಲು-ಬರೆಯಲು ಬರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ. ಪೋಲೀಸರು ಮಾಡಿದ ಮಹಜರ್ ವರದಿಯಲ್ಲಿ ಏನು ಬರೆದಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಬಾಗಿಲು ಹೊಡೆದ ಬೀಗ ಎಲ್ಲಿ ಬಿದ್ದಿತ್ತು ಎಂದರೆ ಸಾಕ್ಷಿಯು ಸೋಫಾ ಮೇಲೆ ಇತ್ತು ಎಂದು ನುಡಿಯುತ್ತಾರೆ. ಅದು ಯಾವ ಕಂಪನಿಯ ಬೀಗ ಎಂದು ಹೇಳಲು ಆಗುತ್ತದಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದಿರುತ್ತಾರೆ. ಸದರಿ ಬೀಗವು ಅಡಿಮುಖವಾಗಿ ಬಿದ್ದಿತ್ತಾ ಅಥವಾ ಮೇಲ್ಮುಖವಾಗಿ ಬಿದ್ದಿತ್ತಾ ಎಂದರೆ ಸಾಕ್ಷಿಯು ಮೇಲ್ಮುಖವಾಗಿ ಬಿದ್ದಿತ್ತು ಎಂದು ನುಡಿಯುತ್ತಾರೆ. ಮಹಜರ್ ಸಮಯದಲ್ಲಿ ಬೀಗವನ್ನು ಹೊರತುಪಡಿಸಿ ಬೇರೆ ಏನನ್ನಾದರೂ ವಶಪಡಿಸಿಕೊಂಡರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಪೋಲೀಸರು ಮಹಜರ್ ನೋಟೀಸನ್ನು ಕೊಟ್ಟಿರುತ್ತಾರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪೋಲೀಸರು ಛಾಯಾಚಿತ್ರವನ್ನು ಬೀರುವಿನ ಜೊತೆ ತೆಗೆದಿರುತ್ತಾರೆ ಎಂದರೆ ಸರಿ, ಅದರಲ್ಲಿ ನನ್ನ ಇರುವಿಕೆಯನ್ನು ಸಹ ತೆಗೆದಿರುತ್ತಾರೆ ಎಂದರೆ ಸರಿ. ಖಾಲಿ ಬೀರುವಿನ ಮುಂದೆ ನಿಮ್ಮನ್ನು ನಿಲ್ಲಿಸಿ ಪೋಲೀಸರು ಛಾಯಾಚಿತ್ರ ತೆಗೆದಿರುತ್ತಾರೆ, ಅದು ಕೃತ್ಯ ನಡೆದ ಬೀರುವಲ್ಲ ಎಂದರೆ, ಸಾಕ್ಷಿಯು ಅದು ಕೃತ್ಯ ನಡೆದ ಬೀರು ಎಂದು ನುಡಿಯುತ್ತಾರೆ. ಚಾಸಾ-1 ರವರು ನಮ್ಮ ಊರಿನಲ್ಲಿ ನರ್ಸ್ ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನೀವು ಮಹಜರ್ ಗೆ ಪೋಲೀಸರ ಒತ್ತಾಯದ ಮೇರೆಗೆ ಠಾಣೆಯಲ್ಲೇ ಸಹಿ ಮಾಡಿರುತ್ತೀರಾ ಎಂದರೆ, ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪೋಲೀಸರು ಯಾವುದೇ ಬೀಗವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನೀವು ಬೀಗವನ್ನು ಖುದ್ದಾಗಿ ನೋಡಿಲ್ಲ, ಹಾಗಾಗಿ ಅದರ ಹೆಸರು ಹೇಳಲು ಬರುತ್ತಿಲ್ಲ ಎಂದರೆ, ಸಾಕ್ಷಿಯು ನನಗೆ ಓದಲು ಬರೆಯಲು ಬರುವುದಿಲ್ಲ. ಹಾಗಾಗಿ ಬೀಗದ ಹೆಸರು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ.

ನಿಮಗೆ ಘಟನೆ ನಡೆದ ಮನೆಯ ತಿಳಿದಿದೆಯಾ ಎಂದರೆ ಸಾಕ್ಷಿಯು ಅದು ರೇವಣ್ಣರವರ ಮನೆಯಾಗಿದ್ದು ಅದರ ಚಕ್ಕುಬಂದಿ ಪೂರ್ವಕ್ಕೆಃಅವರದೇ ಆದ ಖಾಲಿ ಜಾಗ, ಪಶ್ಚಿಮಕ್ಕೆಃ ರೇವಣ್ಣನವರದೇ ಆದ ಮನೆ, ಉತ್ತರಕ್ಕೆಃರೇವಣ್ಣನವರದೇ ಆದ ಮನೆ ಮತ್ತು ದಕ್ಷಿಣಕ್ಕೆಃ ರೇವಣ್ಣನವರದೇ ಆದ ಖಾಲಿ ಜಾಗ ಇರುತ್ತದೆ. ನಿಮಗೆ ಯಾವುದೇ ವಿಚಾರ ತಿಳಿದಿಲ್ಲದಿದ್ದರೂ ಸಹ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

*ಓ. ಕೇ. ಸ. ಇ. ಎ. ಒ.*

ಸಹಿ/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***